# ಎನ್ಐಟಿಕೆ ಸೇವಾದಳದ ಶ್ರಮದಾನ

ಸಂ.ಕ. ಸಮಾಚಾರ, ಮಂಗಳೂರು

ಸುರತ್ಕಲ್ ಎನ್ಐಟಿಕೆ ಸೇವಾದಳವು ಶ್ರಮದಾನದ 49 ವಾರಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಇದೀಗ 50ನೇ ವಾರಕ್ಕೆ ಕಾಲಿಟ್ಟಿದೆ. ಇದರ ಸಲುವಾಗಿ ಎನ್ಐಟಿಕೆಯಿಂದ ಮಂಗಳೂರು ಮಹಾನಗರ ಪಾಲಿಕೆ, ಸುರತ್ಕಲ್‌ವರೆಗೆ ಸ್ವಚ್ಛತಾ ಜಾಗೃತಿ ಜಾಥಾ ನಡೆಯಿತು. ಪ್ಲಾಸ್ಟಿಕ್ ಮುಕ್ತ ಅಭಿಯಾನದ ವೇಳೆ ನಗರದಲ್ಲಿ ಸ್ವಚ್ಛತಾ ಜಾಗೃತಿ ಮೂಡಿಸಲು ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸಿದ ತಂಡವು ರಸ್ತೆಗಳಲ್ಲಿ ಸುರಿದಿರುವ ತ್ಯಾಜ್ಯವನ್ನು ಸ್ವಚ್ಛಗೊಳಿಸುವ ಮತ್ತು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಸಿಕೊಂಡರು.

ಎನ್ಐಟಿಕೆ ಸುರತ್ಕಲ್‌ನ ಜಂಟಿ ರಿಜಿಸ್ಟ್ರಾರ್ ರಾಮ್ ಮೋಹನ್ ನೇತೃತ್ವದ ಎನ್ಐಟಿಕೆ ಸೇವಾದಳವು 2019 ಆಗಸ್ಟ್‌ನಲ್ಲಿ ಪ್ರಾರಂಭವಾದ ಸ್ವಚ್ಛ ಭಾರತ ಅಭಿಯಾನದ ಭಾಗವಾಗಿ 50 ನೇ ವಾರದ ಕಾರ್ಯಕ್ರಮವನ್ನು ಆಚರಿಸಿದರು. ಎನ್ಐಟಿಕೆ ಪ್ರಭಾರ ನಿರ್ದೇಶಕರು, ರಿಜಿಸ್ಟ್ರಾರ್, ಜಂಟಿ ರಿಜಿಸ್ಟ್ರಾರ್, ಎನ್‌ಸಿಸಿ ಅಧಿಕಾರಿಗಳು, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳು, ಎನ್‌ಸಿಸಿ ಕೆಡೆಟ್‌ಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿದರು.

ಈ ಪ್ಲಾಸ್ಟಿಕ್ ಮುಕ್ತ ಅಭಿಯಾನವು ಸ್ವಚ್ಛತಾ ಪಖ್ವಾಡದ ಒಂದು ಭಾಗವಾಗಿತ್ತು, ಸ್ವಚ್ಛತಾ ಪಖ್ವಾಡವು, ಶಿಕ್ಷಣ ಸಚಿವಾಲಯ, ಭಾರತ ಸರ್ಕಾರದ ಉಪಕ್ರಮವಾಗಿದೆ. ಎನ್ಐಟಿಕೆ ಸುರತ್ಕಲ್‌ನ ವಿವಿಧ ವಿಭಾಗಗಳಲ್ಲಿ ಸ್ವಚ್ಛತಾ ಪಖ್ವಾಡದ ಚಟುವಟಿಕೆಗಳನ್ನು ಯೋಜಿಸಲಾಗಿದೆ. ಸೆ.1ರಿಂದ 15ರ ರವರೆಗೆ ನಡೆಯಲಿದೆ.



ಶ್ರಮದಾನದ 49 ವಾರಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರುವ ಎನ್ಐಟಿಕೆ ಸೇವಾದಳ ತಂಡ.

Samyukta Karnataka, Date: 04/09/22, P. No, 02